**B**

**SL. No. : CCC**

ಟ್ಟು ಪ್ರಶ್ನೆಗಳ ಸಂಖ್ಯೆ : 47 ]

Total No. of Questions : 47 ]

**ಸಂಕೇತ ಸಂಖ್ಯೆ : 95-K**

**CCE RF**
**CCE RR**
**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಭಾಷಾಂತರ / Kannada Version)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 25. 03. 2019 ] [ Date : 25. 03. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಪ್ರಜಾಪ್ರಭುತ್ವದ ಯಶಸ್ಸು ಅವಲಂಬಿಸಿರುವುದು ಆ ದೇಶದ ಜನತೆಯ

   (A) ಶಿಕ್ಷಣವನ್ನು

   (B) ಅನಕ್ಷರತೆಯನ್ನು

   (C) ನಿರುದ್ಯೋಗವನ್ನು

   (D) ಆರ್ಥಿಕತೆಯಿನ್ನು

2. ಕ್ಯಾಸ್ಟ್ ಎನ್ನುವ ಪದ ಪೋರ್ಚುಗೀಸ್ ಮತ್ತು ಸ್ಪಾನಿಷ್ ಭಾಷೆಯ – ಪದದಿಂದ ಬಂದಿದೆ

   (A) ಕೋಸ್ಟಲ್

   (B) ಕಮ್ಯುನಿಟಿ

   (C) ಕ್ಯಾಸ್ಟ್

   (D) ಕ್ಯಾಸ್ಟಾ

3. ಬರ್ದೋಲಿ ಸತ್ಯಾಗ್ರಹದ ನೇತಾರರು

   (A) ಮಹಾತ್ಮಾ ಗಾಂಧೀಜಿ

   (B) ಲಾಲ್ ಬಹದ್ದೂರ್ ಶಾಸ್ತ್ರಿ

   (C) ಬಾಲಗಂಗಾಧರ್ ತಿಲಕ್

   (D) ಸರ್ದಾರ್ ವಲ್ಲಭಭಾಯಿ ಪಟೇಲರು

4. ಸಂಘಟಿತವಾಗಿ ರೂಪುಗೊಂಡ ಪ್ರತಿಭಟನಾ ಚಳುವಳಿಯೊಂದು ............................ ಆಗಿ ಪರಿವರ್ತಿತವಾಗಬಹುದು.

   (A) ಸಹಕಾರಿ ಸಂಘಗಳಾಗಿ

   (B) ಗಿಲ್ಡ್‌ಗಳಾಗಿ

   (C) ಒತ್ತಡ ಗುಂಪು

   (D) ಕಾಂಗ್ರೆಸ್

5. ಭಾರತವು ಮೂಲತಃ ಒಂದು

(A) ಅಭಿವೃದ್ಧಿ ರಾಷ್ಟ್ರ

(B) ಕೈಗಾರಿಕಾ ಪ್ರಧಾನ ರಾಷ್ಟ್ರ

(C) ಕೃಷಿ ಪ್ರಧಾನ ರಾಷ್ಟ್ರ

(D) ಸಮಾಜವಾದಿ ರಾಷ್ಟ್ರ

6. 1975 ನೆ ವರ್ಷವನ್ನು ಅಂತಾರಾಷ್ಟ್ರೀಯ ಮಹಿಳೆಯರ ವರ್ಷ ಎಂದು ಘೋಷಿಸಿದ್ದು

(A) ಐ.ಎಂ.ಎಫ್. ( IMF )

(B) ಯುನೆಸ್ಕೊ ( UNESCO )

(C) ಯುನಿಸೆಫ್ ( UNICEF )

(D) ಐ.ಎಲ್.ಓ. ( ILO )

7. ಆದಿವಾಸಿಗಳನ್ನು ಗಾಂಧೀಜಿಯವರು ಹೀಗೆ ಸಂಬೋಧಿಸಿದರು

(A) ಬುಡಕಟ್ಟುಜನ

(B) ದ್ರಾವಿಡರು

(C) ಗಿರಿಜನರು

(D) ಹರಿಜನರು

8. ಕೇಸರಿ ಪತ್ರಿಕೆಯನ್ನು ಪ್ರಾರಂಭಿಸಿದವರು

(A) ಮಹಾತ್ಮ ಗಾಂಧೀಜಿ

(B) ಆ್ಯನಿಬೆಸೆಂಟರು

(C) ಬಾಲಗಂಗಾಧರ ತಿಲಕ್‌ರವರು

(D) ರಾಜಾ ರಾಮ್‌ಮೋಹನ್ ರಾಯ್‌ರವರು

9. ಪಕ್ಕಾ ಆಹಾರ ಎಂದರೆ

(A) ನೀರಿನಲ್ಲಿ ಬೇಯಿಸಿದ ಅಡುಗೆ

(B) ಹಾಲಿನಲ್ಲಿ ಬೇಯಿಸಿದ ಅಡುಗೆ

(C) ತುಪ್ಪದಿಂದ ತಯಾರಾದ ಅಡುಗೆ

(D) ತರಕಾರಿಗಳ ಮತ್ತು ಹಣ್ಣುಗಳ ಹಸಿಯಾದ ಅಡುಗೆ

10. ಆತ್ಮಾರಾಮ್ ಪಾಂಡುರಂಗರಿಂದ ಸ್ಥಾಪಿತವಾದ ಸಮಾಜ

(A) ಪ್ರಾರ್ಥನ ಸಮಾಜ

(B) ಬ್ರಹ್ಮ ಸಮಾಜ

(C) ಆರ್ಯ ಸಮಾಜ

(D) ಸತ್ಯಶೋಧಕ ಸಮಾಜ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ಮಹಾವೀರ | (i) ಬ್ರಹ್ಮ ಸಮಾಜ |
| (B) ಜ್ಯೋತಿರಾವ್ ಫುಲೆ | (ii) ಪ್ರಾರ್ಥನ ಸಮಾಜ |
| (C) ದಯಾನಂದ ಸರಸ್ವತಿ | (iii) ಸಿಖ್ ಧರ್ಮ |
| (D) ರಾಜಾ ರಾಮ್‌ಮೋಹನ್ ರಾಯ್ | (iv) ಸತ್ಯಶೋಧಕ ಸಮಾಜ |
| (E) ಗುರುನಾನಕ್ | (v) ಆರ್ಯ ಸಮಾಜ |
| | (vi) ಜೈನ ಧರ್ಮ |
| | (vii) ಪಾರ್ಸಿ ಧರ್ಮ |

III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಆಧುನೀಕರಣದ ಮುಖ್ಯ ಉದ್ದೇಶವೇನು ?

13. ಕೈಗಾರಿಕೀಕರಣ ಎಂದರೇನು ?

14. ಮಾನವ ವಲಸೆಯ ಹೆಚ್ಚಳಕ್ಕೆ ಕಾರಣವಾದ ಅಂಶ ಯಾವುದು ?

15. ಫ್ರೆಂಚ್ ಮಹಾಕ್ರಾಂತಿಯ ಪ್ರಮುಖ ಧ್ಯೇಯಗಳು ಯಾವುವು ?

16. 'ಕ್ಯಾಸ್ಟ್ ಆ್ಯಂಡ್ ರೇಸ್ ಇನ್ ಇಂಡಿಯಾ' ಎಂಬ ಕೃತಿಯನ್ನು ಬರೆದವರು ಯಾರು ?

17. ಭಾರತದ ನವೋದಯದ ಪಿತಾಮಹ ಎಂದು ರಾಜಾ ರಾಮ್‌ಮೋಹನ್ ರಾಯ್‌ರವರನ್ನು ಏಕೆ ಕರೆಯಲಾಗಿದೆ ?

18. ಸತಿ ಪದ್ಧತಿ ಎಂದರೇನು ?

19. ಭಾರತದ ಪ್ರಥಮ ಮಹಿಳಾ ರಾಷ್ಟ್ರಾಧ್ಯಕ್ಷರು ಯಾರು ?

20. ವಯಸ್ಕರ ಶಿಕ್ಷಣ ಎಂದರೇನು ?

21. ಭಾರತದ ಸಿಲಿಕಾನ್ ವ್ಯಾಲಿ ಎಂದು ಹೆಸರು ಮಾಡಿರುವ ನಗರ ಯಾವುದು ?

22. ಭಾರತದಲ್ಲಿ ಮೊದಲು ರೇಡಿಯೋ ಕ್ಲಬ್‌ಗಳನ್ನು ಸ್ಥಾಪಿಸಿದ್ದು ಎಲ್ಲಿ ?

23. ಕರ್ನಾಟಕದಲ್ಲಿ ಬ್ರಾಹ್ಮಣರಲ್ಲದವರಿಗೆ ಮೀಸಲಾತಿ ನೀಡಿದ ದೊರೆಯನ್ನು ಹೆಸರಿಸಿ.

24. 1949 ರ ಚೀನಾದ ಕ್ರಾಂತಿಯ ನಾಯಕ ಯಾರು ?

25. ಪ್ರಾರ್ಥನಾ ಸಮಾಜ ಹಿಂದೂ ಧರ್ಮದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ ಹೇಗೆ ?

26. ಕರ್ನಾಟಕದಲ್ಲಿ ಆಂಗ್ಲರ ವಿರುದ್ಧ ಹೋರಾಡಿದ ರಾಣಿಯನ್ನು ಹೆಸರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** $14 \times 2 = 28$

27. ಸಾಮಾಜಿಕ ಬದಲಾವಣೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರವೇನು ?

28. ಮಹಿಳೆಯರು ಆರ್ಥಿಕವಾಗಿ ಹೆಚ್ಚು ಸ್ವತಂತ್ರರಾಗುತ್ತಿರುವರು. ಏಕೆ ?

29. ಕೈಗಾರಿಕೀಕರಣದಿಂದ ಸಾಮಾಜಿಕ ಬದಲಾವಣೆಯ ಮೇಲಾದ ಪರಿಣಾಮವೇನು ?

30. ಸಾಮಾಜಿಕ ಬದಲಾವಣೆಗೆ ಅನಕ್ಷರತೆಯು ಹೇಗೆ ತೊಡಕಾಗಿದೆ ?

31. ಸಾಮಾಜಿಕ ಬದಲಾವಣೆಗೆ ಪ್ರಾದೇಶಿಕ ಅಸಮತೋಲನ ಹೇಗೆ ತೊಡಕಾಗಿದೆ ?

32. ಸಂಸ್ಕೃತಾನುಕರಣ ಪ್ರಕ್ರಿಯೆಯಿಂದ ಆಗಿರುವ ಸಾಮಾಜಿಕ ಬದಲಾವಣೆ ಏನು ?

33. ಸಾಮಾಜಿಕ ಚಳುವಳಿಯ ಉದ್ದೇಶಗಳೇನು ?

34. ಕಬೀರರು ಎರಡೂ ಧರ್ಮದವರ ಕೋಪಕ್ಕೆ ಗುರಿಯಾದರು. ಏಕೆ ?

35. ಪ್ರತಿಭಟನಾತ್ಮಕ ಚಳುವಳಿಗಳ ಆದರ್ಶಗಳೇನು ?

36. ಭಾರತದ ಮಹಿಳೆಯರ ಶಿಕ್ಷಣಕ್ಕಾಗಿ ಶ್ರಮಿಸಿದ ಪ್ರಮುಖ ವ್ಯಕ್ತಿಗಳನ್ನು ಹೆಸರಿಸಿ.

37. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ವಿವಾಹಕ್ಕೆ ಸಂಬಂಧ ಪಟ್ಟಂತೆ ಜಾರಿಗೆ ತಂದ ಕಾನೂನುಗಳೇನು ?

38. ಬೋಗಾರ್ಡಸ್ ಮತ್ತು ಎಸ್.ಎಫ್. ನಾಡೆಲ್‌ರವರ ಪ್ರಕಾರ ಬುಡಕಟ್ಟಿನ ವ್ಯಾಖ್ಯಾನವೇನು ?

39. ಬುಡಕಟ್ಟು ಜನಾಂಗದ ಅಭಿವೃದ್ಧಿಗೆ ಭಾರತ ಸರ್ಕಾರ ರೂಪಿಸಿದ ಮೂರು ನೀತಿಗಳು ಯಾವುದು ?

40. ಸಮೂಹ ಮಾಧ್ಯಮಗಳ ವಿಧಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.

V. **ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ :** 6 × 3 = 18

41. ಸಾಮಾಜಿಕ ಬದಲಾವಣೆಯ ಲಕ್ಷಣಗಳೇನು ?

42. ಜಾತಿ ಪದ್ಧತಿಯ ಲಕ್ಷಣಗಳೇನು ?

43. ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸತ್ಯಶೋಧಕ ಸಮಾಜದ ಪಾತ್ರವನ್ನು ವಿವರಿಸಿ.

44. ಬ್ರಿಟಿಷರ ಕಾಲದಲ್ಲಿ ಸ್ತ್ರೀಯರಲ್ಲಿ ಅರಿವು ಮತ್ತು ಅಭಿವೃದ್ಧಿ ತಂದ ಮಹಿಳಾ ಸಂಘಟನೆಗಳನ್ನು ತಿಳಿಸಿ.

45. ಭಾರತೀಯ ಬುಡಕಟ್ಟು ಜನಾಂಗಗಳಲ್ಲಾದ ಸಾಮಾಜಿಕ ಬದಲಾವಣೆಯನ್ನು ವಿವರಿಸಿ.

46. ಚಲನ ಚಿತ್ರಗಳು ಸಾಮಾಜಿಕ ಮೌಲ್ಯಗಳ ಮೇಲೆ ಹೇಗೆ ಪ್ರಭಾವಬೀರುತ್ತವೆ ?

VI. **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ :** 1 × 4 = 4

47. ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಬದಲಾವಣೆಯ ನಡುವಿನ ಸಂಬಂಧವನ್ನು ವಿವರಿಸಿ.